ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
**ಆಯುಕ್ತರ ಕಛೇರಿ, ಹೊಸ ಶಾಲಾ ಶಿಕ್ಷಣ ಕಛೇರಿಗಳು,ನೃಪತುಂಗ ರಸ್ತೆ, ಕೆ.ಆರ್ ವೃತ್ತ, ಬೆಂಗಳೂರು-01**

ಸಂಖ್ಯೆ:ಸಿ1(6)ದೈ.ವ್ಯ.ಸಂ.ನೃ.ನಾ.ಚಿ.ನಿವೃತ್ತಿ/01/2021-22/E-942126

ದಿನಾಂಕ:24-03-2023

**-:ಜ್ಞಾಪನ:-**

ವಿಷಯ: 2023ನೇ ಸಾಲಿನ (ದಿನಾಂಕ:01-01-2023 ರಿಂದ ದಿನಾಂಕ:31-12-2023ರ ಅವಧಿಯಲ್ಲಿ) ಗ್ರೂಪ್-"ಬಿ" ವಿಶೇಷ ವೃಂದಗಳಾದ (ವೃತ್ತಿ ಶಿಕ್ಷಣ), (ಚಿತ್ರಕಲೆ) ಮತ್ತು (ಸಂಗೀತ, ನೃತ್ಯ ನಾಟಕ) ಅಧಿಕಾರಿಗಳು 60ವರ್ಷ ವಯೋಮಿತಿ ಪೂರೈಸಿ, ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:1. ಅಧೀನ ಕಛೇರಿಗಳಿಂದ ಸ್ವೀಕೃತವಾಗಿರುವ ಮಾಹಿತಿ
2.ಈ ಕಛೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ:14-03-2023

**************************

ಸಾರ್ವಜನಿಕ ಶಿಕ್ಷಣ ಇಲಾಖೆಯ ಈ ಕೆಳಕಂಡ ಬೋಧಕ ಗ್ರೂಪ್-"ಬಿ" ವಿಶೇಷ ವೃಂದಗಳಾದ (ವೃತ್ತಿ ಶಿಕ್ಷಣ), (ಚಿತ್ರಕಲೆ) ಮತ್ತು (ಸಂಗೀತ, ನೃತ್ಯ ನಾಟಕ) ವೃಂದದ ಅಧಿಕಾರಿಗಳು 2023ನೇ ಸಾಲಿನಲ್ಲಿ (ದಿನಾಂಕ:01-01-2023 ರಿಂದ ದಿನಾಂಕ:31-12-2023ರ ಅವಧಿಯಲ್ಲಿ) 60ವರ್ಷಗಳ ವಯೋಮಿತಿ ಪೂರೈಸುವುದರಿಂದ, ಅವರ ಹೆಸರಿನ ಮುಂದೆ ಸೂಚಿಸಿರುವ ದಿನಾಂಕಗಳ ಅಪರಾಹ್ನದಂದು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ-95(1)ರ ಪ್ರಕಾರ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಲು ಅನುಮತಿ ನೀಡಬಹುದಾದ ಅಧಿಕಾರಿಗಳ ಪಟ್ಟಿಯನ್ನು ಈ ಕಛೇರಿ ವತಿಯಿಂದ ಉಲ್ಲೇಖ(2)ರ ಜ್ಞಾಪನದಂತೆ ಪ್ರಕಟಿಸಿದೆ.

ಮುಂದುವರೆದು, ಸದರಿ ಬೋಧಕ ಗ್ರೂಪ್-"ಬಿ" ವಿಶೇಷ ವೃಂದದ ಅಧಿಕಾರಿಗಳ ಪಟ್ಟಿಯನ್ನು ಪರಿಶೀಲಿಸಿ, ಮಾರ್ಪಾಡು/ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಈ ಕಛೇರಿಗೆ ದಿನಾಂಕ:18-03-2023ರೊಳಗಾಗಿ ಮುದ್ದಾಂ/ನೋಂದಣಿ ಅಂಚೆ ಹಾಗೂ ಇ-ಮೇಲ್ ವಿಳಾಸ:**est1cpi@gmail.com** ಮೂಲಕ ಮಾಹಿತಿ ಕಳುಹಿಸಲು ಸಂಬಂಧಿಸಿದ ಅಧೀನ ಕಛೇರಿಯ ಮುಖ್ಯಸ್ಥರಿಗೆ ಈ ಕಛೇರಿ ವತಿಯಿಂದ ಉಲ್ಲೇಖ(2)ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ. ಆದರೆ, ಸದರಿ ಅಧೀನ ಕಛೇರಿ ಮುಖ್ಯಸ್ಥರಿಂದ ಯಾವುದೇ ಮಾರ್ಪಾಡು/ಸೇರ್ಪಡೆ/ತಿದ್ದುಪಡಿ ಕುರಿತು, ಸೂಚಿಸಿರುವ ನಿಗಧಿತ ಅವಧಿಯಲ್ಲಿ ಸ್ವೀಕೃತವಾಗದ ಕಾರಣ ಅಂತಿಮ ಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಿದೆ.

| ಕ್ರಮ ಸಂಖ್ಯೆ | ಅಧಿಕಾರಿಯ ಹೆಸರು ಮತ್ತು ಪದನಾಮ | ಜನ್ಮ ದಿನಾಂಕ | ನಿವೃತ್ತಿ ದಿನಾಂಕ |
|---|---|---|---|
| 01 | ಶ್ರೀ ಘನ ಸೈಯದ್ ಮುಯೀನುದ್ದಿನ್ ಜಂಗಿ, ಕಲಾವಿದರು, ಡಿ.ಎಸ್.ಇ.ಆರ್.ಟಿ ಬೆಂಗಳೂರು | 20-05-1963 | 31-05-2023 |
| 02 | ಶ್ರೀ ಮುನಿಯಪ್ಪ ಎಂ.ಆರ್ ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಉಪನಿರ್ದೇಶಕರು(ಆಡಳಿತ) ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ರಾಮನಗರ ಜಿಲ್ಲೆ | 20-06-1963 | 30-06-2023 |
| 03 | ಶ್ರೀ ಪಾಂಡುರಂಗ ಎಫ್ ಪೂಜಾರ ವಿಷಯ ಪರಿವೀಕ್ಷಕರು(ವೃತ್ತಿಶಿಕ್ಷಣ) ಉಪನಿರ್ದೇಶಕರು(ಆಡಳಿತ) ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ ಜಿಲ್ಲೆ | 22-07-1963 | 31-07-2023 |

(ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

24/3/23

ಡಾ.ರೂಪಶ್ರೀ.ಎಸ್.,ಕೆ.ಎ.ಎಸ್.,
ಜಂಟಿ ನಿರ್ದೇಶಕರು(ಆಡಳಿತ)

ಗೆ,

1. ಮಹಾಲೇಖಪಾಲರು (ಎ) & (ಇ) ಪಾರ್ಕ್ ಹೌಸ್ ರಸ್ತೆ ಬೆಂಗಳೂರು-01
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು ರವರ ಮಾಹಿತಿಗಾಗಿ
3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ/ಕಲಬುರಗಿ ರವರ ಅಗತ್ಯಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಬೆಂಗಳೂರು, ಮೈಸೂರು, ಬೆಳಗಾವಿ, ಮತ್ತು ಕಲಬುರಗಿ ರವರ ಅಗತ್ಯಕ್ರಮಕ್ಕಾಗಿ

5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರ ಅಗತ್ಯಕ್ರಮಕ್ಕಾಗಿ
6. ಕಛೇರಿ ಪ್ರತಿ